ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯದಲ್ಲಿ

**ಸಿಸಿ. ನಂ. 61/2023**

ಫಿರ್ಯಾದುದಾರರು -ವಿರುದ್ಧ- ಆರೋಪಿ

ಮಧುಗಿರಿ ಪೋಲೀಸ್ ಗೋಪಾಲ

ದೋಷಾರೋಪಣೆ

ಶ್ರೀಮತಿ ಶಿಲ್ಪ ಹೆಚ್.ಎ. ಬಿ.ಎ.ಎಲ್. ಎಲ್.ಎಲ್.ಬಿ. ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಕೆಳಂಡ ಆರೋಪಿತರಾದಃ-

ಗೋಪಾಲ @ ಗೋಪಿ ಬಿನ್ ಮಾರಣ್ಣ, 35 ವರ್ಷ,
ಮಂಡರ ಬಂಡೆ, 14 ನೇ ವಾರ್ಡ್, ಮಧುಗಿರಿ ಟೌನ್.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

1. ದಿನಾಂಕಃ 23.07.2023 ರಂದು ಮಧ್ಯಾಹ್ನ 2.40 ಗಂಟೆ ಸಮಯದಲ್ಲಿ ಮಧುಗಿರಿ ಠಾಣಾ ಸರಹದ್ದಿಗೆ ಸೇರಿದ ತಾಲ್ಲೂಕು ಆರೋಗ್ಯಾಧಿಕಾರಿಯವರ ಕಚೇರಿಯ ಬೀಗವನ್ನು ಇಕ್ಕಳದಿಂದ ಮುರಿದು ಕಚೇರಿಯ ಒಳಗಡೆ ಅತಿಕ್ರಮ ಪ್ರವೇಶ ಮಾಡುವುದರ ಮೂಲಕ ಭಾ.ದಂ.ಸಂ. ಕಲಂ 454 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

2. ಮೇಲ್ಕಂಡ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು, ಏಕೋದ್ದೇಶದಿಂದ ಮೇಲ್ಕಂಡ ಸ್ಥಳದಲ್ಲಿ ಒಂದು ಡೆಲ್ ಕಂಪನಿಯ ಕಪ್ಪು ಬಣ್ಣದ ಕೀ ಬೋರ್ಡ್, ಎರಡು ಕಪ್ಪು ಬಣ್ಣದ ಡೆಲ್ ಕಂಪನಿಯ ಮೌಸ್, ಐದು ಕಪ್ಪು ಬಣ್ಣದ ಕಂಪ್ಯೂಟರ್ ಪವರ್ ಕೇಬಲ್‌ಗಳು, ಒಂದು ಬಿಳಿ ಬಣ್ಣದ ಬಯೋಮೆಟ್ರಿಕ್ ಹ್ಯಾಂಡ್

ಡಿವೈಸ್, ಎರಡು ಕಪ್ಪು ಬಣ್ಣದ Foxin Company ಯ ಮಿನಿ ಯು.ಪಿ.ಎಸ್.ಗಳನ್ನು ಕಳ್ಳತನ ಮಾಡಿರುವುದ ಮೂಲಕ ಭಾ.ದಂ.ಸಂ. ಕಲಂ 380 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

(ಮೇಲ್ಕಂಡ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆ ಮತ್ತು ಕಾರ್ಯ ವ್ಯಾಪ್ತಿಯಲ್ಲಿ ಬರುವುದರಿಂದ, ನಿಮ್ಮಗಳ ವಿಚಾರಣೆ ಈ ನ್ಯಾಯಾಲಯದ ಮುಂದೆ ನಡೆಯುವಂತೆ ಈ ಮೂಲಕ ನಿರ್ದೇಶಿಸಲಾಗಿದೆ)

ದಿನಾಂಕಃ 03-04-2024

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ ಎಂ ಎಫ್ ಸಿ, ಮಧುಗಿರಿ.